ಹಣ ಎಷ್ಟು? ಬಿಡ್ದುದಾರರು ಬಾಕಿ ನಿಲ್ಲಿಸದಂತೆ ಸರ್ಕಾರ ನಿಬಂಧನೆಗಳನ್ನು ಹಾಕಿತ್ತೆ, ಹಾಕಿದ್ದರೆ ಬಾಕಿ ಇರಲು ಕಾರಣವೇನು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು)

ಅ) ಬಾಕಿ ಇರುವವರ ಸಂಖ್ಯೆ. 150 ಜನರು. ಒಟ್ಟು ಹಣ ರೂ. 26,18,00,788ಕೋಟಿ, ಹೌದು, ನಿಬಂಧನೆ ಹಾಕಿತ್ತು. ಆದರೆ, ನ್ಯಾಯಾಲಯದ ತಡೆಯಾಜ್ಞೆಗಳಿಂದಾಗಿ ಬಾಕಿ ಇರುತ್ತದೆ.

ಮೂಡಿಗೆರೆ ತಾಲ್ಲೂಕಿನ ಗೋಣಿಬೀಡಿಗೆ ಪೋಲೀಸ್ ಸ್ಟೇಷನ್ ಮಂಜೂರಾತಿ.

2714 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನ ಗೋಣಿಬೀಡಿಗೆ ಪೋಲೀಸ್ ಸ್ಟೇಷನ್ ಬಹಳ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಲ್ಲಿ ಆಗಾಗ ಗಲಾಟೆ, ಕೋಮು, ಗಲಭೆ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಪೋಲೀಸ್ ಸ್ಟೇಷನ್ ಸ್ಥಾಪನೆ ಬಗ್ಗೆ ಇನ್ನೂ ಮಂಜೂರುಮಾಡದಿರಲು ಕಾರಣವೇನು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) ಹೌದು. ಮನವಿ ಪತ್ರಗಳು ಸರ್ಕಾರಕ್ಕೆ ಬಂದಿವೆ.

ಆ) ಹೌದು.

ಇ) ಆರ್ಥಿಕ ಸಂಪನ್ಮೂಲಗಳನ್ನುನುಸರಿಸಿ, ಈ ವಿಷಯವನ್ನು ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ಹರಿಜನ ಮತ್ತು ಗಿರಿಜನರ ಮೇಲೆ ದೌರ್ಜನ್ಯ.

2713 - ಶ್ರೀಮತಿ, ಮೋಟಮ್ಮ (ಮೂಡಿಗೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಇತ್ತೀಚಿನ ಎರಡು ವರ್ಷದಲ್ಲಿ ಹರಿಜನರ ಮತ್ತು ಗಿರಿಜನರ ಮೇಲೆ ನಡೆದಿರುವ ದೌರ್ಜನ್ಯಗಳೆಷ್ಟು?
(ಜಿಲ್ಲಾವಾರು ವಿವರನ್ನೊದಗಿಸುವುದು)

ಆ) ದೌರ್ಜನ್ಯ ನಡೆಸಿದ ಜನರ ಮೇಲೆ ಸರ್ಕಾರ ಯಾವ ಶಿಸ್ತಿನ ಕ್ರಮ ಕೈಗೊಂಡಿದೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಭಕಾರಿ ಸಚಿವರು) :

ಅ) ಅನುಬಂಧದಲ್ಲಿರುವಂತೆ

ಆ) ಭಾರತ ಸರ್ಕಾರವು ಪರಿಶಿಷ್ಟ ಜಾತಿ. ಪರಿಶಿಷ್ಟ ವರ್ಗಗಳ (ಅತ್ಯಾಚಾರಕ ನಿರೋಧಕ) ಕಾನೂನು 1989ನ್ನು ಹೊರಡಿಸಿದ್ದು ಅದು 30-1-1990ರಿಂದ ಜಾರಿಗೆ ಬಂದಿರುತ್ತದೆ. ಈ ಕಾಯಿದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯಗಳ ತಡೆ ಹಾಗೂ ಅಂತಹ ದೌರ್ಜನ್ಯಗಳಿಗೆ ಕಾರಣವಾದವರನ್ನು ಶಿಕ್ಷಿಸುವ ವಿಧಾನಗಳನ್ನು ಒಳಗೊಂಡಿರುತ್ತದೆ.

ದೌರ್ಜನ್ಯಗಳು ವರದಿಯಾದ ಕೂಡಲೇ ಪ್ರಕರಣಗಳನ್ನು ದಾಖಲು ಮಾಡಿಕೊಂಡು ತಪಾಸಣೆ ಮಾಡಿ ಆರೋಪ ಪಟ್ಟಿಗಳನ್ನು ಸಲ್ಲಿಸಲಾಗುತ್ತದೆ.